ಕೋಲಾರ ಡಿವೀಜ್.

ಇಸ್ತಿಹಾರ್ನಾಮೆ.

ಕೋಲಾರ, 8ನೆ ಏಪ್ರಿಲ್ 1907.

ತಾರೀಖು 11ನೆ ಏಪ್ರಿಲ್ 1907 ಇಸವಿ 2ನೆ ಭಾಗದ ಇಂಗ್ಲೀಷ್ ಮೈಸೂರು ಗೆಜೆಟ್ಟಿನಲ್ಲಿ ಘಾಯಿಷ್ ಮಾಡಿರತಕ್ಕ ಕೋಲಾರ ಡಿಸ್ಟ್ರಿಕ್ಟ್ ವಾಲೂರು ತಸಬೂದಲ್ಲಿ ಹೊಸದಾಗಿ ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್ ಕಟ್ಟುತಕ್ಕ ಬಗ್ಗೆ ಟೆಂಡರ್ ವಿಷಯಕವಾದ ಇಸ್ತಿಹಾರ್ನಾಮೆಗೆ ಸಮಸ್ತ ಜನಗಳೂ ಗಮನಕೊಡತಕ್ಕದ್ದು.

ಕೆ. ಕೃಷ್ಣಯ್ಯಂಗಾರ್,
ಎಗ್ಜಿಕ್ಯೂಟೀವ್ ಇಂಜನಿಯರ್.

ಹಾಸನ ಡಿವೀಜ್.

ನೋಟಸ್.

ಈ ಕೆಳಗೆ ನಮೂದಿಸಿರುವ ಹಸರುಗಳಿಗೆ ಪ್ರತಿಯಾಗಿ ತೋರಿಸಿರುವ ಮೊಬಲಗು ಸದರಿ ಯಾವದಕ್ಕೆ ಮಾವತಿಯಾಗದೆ, ಈ ಆಫೀಸಿನ ಅಕೌಂಟ್ಸ್ ಡಿಪಾಜಿಟ್‌ನಲ್ಲಿ ಬಾಕಿ ನಿಂತಿರುತ್ತೆ. ಈ ನೋಟಿಸ್ ಘಾಯಿಷ್ಮಾದ ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಅಯಾಯ ಹಕ್ಕುದಾರರೇ ಆಗಲಿ ಅಥವಾ ಅವರು ವ್ಯತಪಟ್ಟಿದ್ದ ಪಕ್ಷದಲ್ಲಿ ಅವರ ನ್ಯಾಯವಾದ ಹಕ್ಕುದಾರರೇ ಆಗಲಿ ತಮ್ಮ ಹಕ್ಕುದಾರಿಕೆಯನ್ನು ಸ್ಥಾಪಿಸಿ ಸದರಿ ಮೊಬಲಗು ತಮಗೆ ಸಲ್ಲಬೇಕೆಂದು ತಿಳಿಸದಪಕ್ಷದಲ್ಲಿ ಅದು ಸರ್ಕಾರಕ್ಕೆ ಸೇರಿಸಲ್ಪಡುತ್ತೆ :—

ನಂ.	ಹೆಸರು.	ಸಲ್ಲಬೇಕಾದ ಮೊಬಲಗೆ ಅವರಿಂದ ಮಾಡಲ್ಪಟ್ಟ ಕೆಲಸಗಳು.	ಸಲ್ಲಬೇಕಾದ ಮೊಬಲಗು.
			ರೂ. ಆ. ಪೈ.
1	ವೆಂಕಟನಾಯಕ	1904–05ನೆ ಬಾಣಾವರ, ಕೆಲೂರು ಮೂಡಿಗೆರೆ ರಸ್ತೆ ರಿಪೇರಿ.	8 11 7
2	ಮುನಿಸಾಮಿ	ಡಿಟೋ	1 4 9
3	ಅಲಸಿಂಗ್ಯಾಚಾರ್ ಮತ್ತು ನರಸಿಂಹಾಚಾರ್.	ಬುಡನೂರು ಕರ ರೆಸ್ಟೋರ್ ಮಾಡಿದ್ದು	3 0 0
4	ಡಿ. ವೆಂಕಟನಾಯಕ	904—05ನೆ ಹಾಸನ, ಚಿಕ್ಕವಗಳೂರು ರಸ್ತೆ ರಿಪೇರಿ	24 11 0

ಎಫ್. ಎ. ಸ್ಟೀಲ್,
ಅಫೀಷಿಯೇಟಿಂಗ್ ಎಗ್ಜಿಕ್ಯೂಟೀವ್ ಇಂಜನಿಯರ್.

ಪೊಲೀಸ್ ಇಲಾಖೆ.

ನೋಟಿಸ್.

ತಾರೀಖು 11ನೆ ಏಪ್ರಿಲ್ 1907.

ತಾರೀಖು 11—4—1907ರಲ್ಲಿ ಬಂದು ನೂರು ರೂಪಾಯಿನ ಮತ್ತು $\frac{T.\ A}{53}$ 00967 (ನೂದರಾಸ್ ಸರ್ಕಲ್) ನಂಬರಿನ ನೋಟು ಒಂದನ್ನು ಚನ್ನಪಟ್ಟಣ ತಾಲ್ಲೂಕು ಶಿರಸ್ತೆದಾರ್ ಹಾಲಿ ಬೆಂಗಳೂರು ತಾಲ್ಲೂಕಿನಲ್ಲಿ ನೀಮ್‌ತಾನ್ ಅಫಿಸರಾಗಿರುವ ನಂ॥ ವೆಂಕಟೇಶಸಾವಿರಾಯರು ಕಳದುಕೊಂಡಿರುತ್ತಾರೆ. ಸದರಿ ನೋಟು ಯಾರಲ್ಲಿ ಕೇರುತ್ತೆ ಮತ್ತು ಅವರಲ್ಲಿ ಹ್ಯಾಗೆ ಬಂತೆಂಬ ಸಂಗತಿ ತಿಳಿಸತಕ್ಕವರಿಗೆ 10 ರೂಪಾಯಿ ಇನಾಂ ಕೊಡುವದಾಗಿ ಸಹಾ ತಿಳಿಸುತ್ತಾರೆ. ನೋಟಿನ ಸಂಬಂಧವಾಗಿ ತಿಳಿದುಬರುವ ಸಂಗತಿ ಬೆಂಗಳೂರು ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟರಲ್ಲಿಗೆ ತಿಳಿಯಪಡಿಸತಕ್ಕದ್ದು.

ಎಲ್. ಕೃಷ್ಣರಾವ್,
ಸೂಪರಿಂಟೆಂಡೆಂಟ್, ಬೆಂಗಳೂರು ಡಿಸ್ಟ್ರಿಕ್ಟ್.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ಇಸ್ತಿಹಾರ್ ತಾರೀಖು 29ನೆ ಮಾರ್ಚ್ 1907.

ಸ್ರ್ 1907ನೆ ಇಸವಿ ಜುಲೈ ಮಾಹೆ ತಾರೀಖು 1ರ ಲಾಗಾಯತು 1908ನೆ ಇಸವಿ ಜೂನ್ ಮಾಹೆ ತಾರೀಖು 30ರ ವರಿಗೆ ಈ ಕೆಳಗಿನ ಎ. ಷೆಡ್ಯೂಲಿನಲ್ಲಿ ನಮೂದಿಸುವ ಮೈಸೂರು ಸಿಟಿಗೆ ಸೇರಿದ ತಮಾಂ ಟೋಲ್ ಗೇಟುಗಳ ಮುಖಾಂತ್ರ ಸಿಟಿ ವಳಕ್ಕೆ ಬರುವ ಗಾಡಿಗಳು, ಜಾನವಾರುಗಳು, ವಗೈರೆಗಳ ಮೇಲೆ ಬಿ. ಷೆಡ್ಯೂಲಿನಲ್ಲಿ ನಮೂದಾಗುವ ವರಪಂತೆ ಸಿಟಿ ಮ್ಯುನಿಸಿಪಲ್